ಈ ಹೇಳಿಕೆಯನ್ನು ಸದನದ ಮುಂದೆ ನೀಡಬಯಸುತ್ತೇನೆ. 1990-91ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಂದಿ ಮಾರಾಟ ನಿಷೇಧ ಕಾಯಿದೆಯನ್ನು ಜಾರಿಗೆ ತಂದು ಅಬ್ಕಾರಿ ಗುತ್ತಿಗೆದಾರರಿಂದ ಹೆಚ್ಚುವರಿ ಮಾಸಿಕ ಬಾಡಿಗೆಯನ್ನು ನಿಗಧಿಪಡಿಸಲಾಗಿದೆ ಎಂಬುದು ನಿಜವಿರುವುದಿಲ್ಲ. ಗುತ್ತಿಗೆದಾರರ ಮುಖಾಂತರ ಶೇಂದಿ ಮಾರಾಟ ನಿಷೇಧ ನಂತರ ಅಬ್ಕಾರಿ ಸಾರಾಯಿ ಗುತ್ತಿಗೆದಾರರಿಗೆ ಸರ್ಕಾರದ ವತಿಯಿಂದ ಹೆಚ್ಚಿಗೆ ಗುತ್ತಿಗೆ ಹಣ ನಿಗಧಪಡಿಸಿರುವುದಿಲ್ಲ. ಆದರೆ ಸಾರಾಯಿ ಗುತ್ತಗೆದಾರರು ಸಾರ್ವಜನಿಕ ಬಹಿರಗ ಹರಾಜಿನಲ್ಲಿ ಭಾಗವಹಿಸಿರುತ್ತಾರೆ ಮತ್ತು ಯಾರು ಹೆಚ್ಚಿನ ಸವಾಲನ್ನು ನೀಡಿದ್ದಾರೋ ಅಂತಹವರಿಗೆ ಸಾರಾಯಿ ಗುತ್ತಿಗೆಯನ್ನು ನೀಡಲಾಗಿದೆ. ಶೇಂದಿ ಮುಕ್ತ ಮಾರಾಟದ ಚಳವಳಿಯಿಂದ ಗುತ್ತಿಗೆದಾರರಿಗೆ ನಷ್ಟ ಪರಿಹಾರ ನೀಡುವ ಬಗ್ಗೆ ಯಾವುದೇ ಒಪ್ಪಿಗೆಯನ್ನು ಸರ್ಕಾರ ನೀಡಿಲ್ಲ.

ಬೋನೇಜ್ ಖಾಯಿಲೆ ಐಸೋ ಸೆಕ್ಸುಯಲ್ ಪ್ರಿ ಕಾಷಿಯಸ್ ಪ್ಯುಬರ್ಟಿ ಸರ್ಕಾರಿ ಆಸ್ಪತ್ರೆಗಳ ಮೂಲಕ ಔಷಧಿಗಳನ್ನು ಒದಗಿಸಿಕೊಡುವ ಬಗ್ಗೆ.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ದೇಶದಲ್ಲಿಯೇ ಅತ್ಯಂತ ವಿರಳ ಹಾಗೂ ಅಪರೂಪದ ಖಾಯಿಲೆಯಾದ ಐಸೋ ಸೆಕ್ಸುಯಲ್ ಪ್ರಿ ಕಾಷಿಯಸ್ ಪ್ಯುಬರ್ಟಿ ಬೋನೇಜ್ ಎಂಬ ಖಾಯಿಲೆಗಾಗಿ ರಾಜ್ಯದಲ್ಲಿನ ಒಂದೆರಡು ಮಕ್ಕಳು ಬಳಲುತ್ತಿರುವುದು ತಿಳಿದು ಬರುತ್ತದೆ. ಈ ರೋಗಿಯನ್ನು ರಾಜ್ಯದ ಆಸ್ಪತ್ರೆಗಳಲ್ಲಿ ಶುಶ್ರೂಷೆಗೆ ಒಯ್ದಾಗ ಅಲ್ಲಿ ಚಿಕಿತ್ಸೆಯ ಸೌಲಭ್ಯವನ್ನು ಪಡೆಯಲಾಗಲಿಲ್ಲ. ತದನಂತರ ವೆಲ್ಲೂರಿನ ಆಸ್ಪತ್ರೆಯಲ್ಲಿ ಔಷಧೋಪಚಾರಗಳ ಮಾರ್ಗದರ್ಶನ ಪಡೆಯಲಾಯಿತು. ಆದರೆ ಬೇಕಾಗುವ ಅತ್ಯಗತ್ಯ ಔಷಧಿಗಳು ಕೂಡ ಈ ತನಕ ನಮ್ಮ ದೇಶದಲ್ಲಿ ಲಭ್ಯವಿದೆ ಅದನ್ನು ವಿದೇಶಗಳಿಂದ ತರಿಸಬೇಕಾಗಿರುವುದು ಇನ್ನೊಂದು ದುರಂತ. ದುಬಾರಿಯಾದ ಔಷಧಿಗಳ ಖರ್ಚುವೆಚ್ಚವು ತಿಂಗಳಿಗೆ 10 ಸಾವಿರ ರೂಪಾಯಿಗಳಿಗೂ ಮೀರುತ್ತದೆ ಎಂಬುದು ಅಧಿಕೃತವಾಗಿ ತಿಳಿದುಬರುತ್ತದೆ. ಇಂಥ ಖಾಯಿಲೆ ಬಂದ ರೋಗಿಯ ಪೋಷಕರು ತೀರಾ ಬಡವರಾಗಿರುವುದರಿಂದ ತಮ್ಮ ಮಗಳನ್ನು ಬದುಕಿಸಲು ನಿಸ್ಸಹಾಯಕರಾಗಿರುತ್ತಾರೆ. ಘನ್ ಸರ್ಕಾರದವರು ರಾಜ್ಯದಲ್ಲಿಯೇ ಒಬ್ಬಿಬ್ಬರಿಗೆ ಇರಬಹುದಾದ ಈ ರೋಗಕ್ಕೆ ಔಷಧಿಗಳನ್ನು ಸರ್ಕಾರಿ ಆಸ್ಪತ್ರೆಯ ಮೂಲಕ ಒದಗಿಸಿಕೊಟ್ಟು ಅಥವಾ ಇನ್ನಾವುದೇ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡುವುದರ ಮೂಲಕ ನಿಸ್ಸಹಾಯಕರಾದ ರೋಗಿಗಳಿಗೆ ಮತ್ತು ಆ ಕುಟುಂಬ ವರ್ಗದವರಿಗೆ ಸಾಂತ್ವನ ನೀಡಿ ಮಾನವೀಯತೆಯನ್ನು ಪ್ರದರ್ಶಿಸಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) : "ಐಸೋ ಸೆಕ್ಸುಯಲ್ ಪ್ರಿಕಾಷಿಯಸ್ ಪ್ಯುಬರ್ಟಿ ಬೋನೇಜ್" ಈ ಖಾಯಿಲೆಯು ತುಂಬಾ ವಿರಳವಾದುದು. ಸರ್ಕಾರೀ ಆಸ್ಪತ್ರೆಗಳಲ್ಲಿ ಈ ಖಾಯಿಲೆ ವರದಿಯಾಗಿರುವುದಿಲ್ಲ. ಸರ್ಕಾರೀ ಆಸ್ಪತ್ರೆಗಳಲ್ಲಿ ಇಷ್ಟು ವಿರಳವಾದ ಮತ್ತು ಅಪರೂಪದ ಖಾಯಿಲೆಗೆ ಬೇಕಾಗುವ ಪರೀಕ್ಷೆಗಳ ಸೌಲಭ್ಯವಾಗಲೀ ಮತ್ತು ಚಿಕಿತ್ಸಾ ಸೌಲಭ್ಯವಾಗಲೀ ಇರುವುದಿಲ್ಲ. ಈ

ಖಾಯಿಲೆಗೆ ತಗಲುವ ವೆಚ್ಚವನ್ನು ಸರ್ಕಾರದ ವಿಶೇಷ ಆಜ್ಞೆಯಿಂದಾಗಲಿ ಅಥವಾ ಮುಖ್ಯಮಂತ್ರಿಗಳ ನಿಧಿಯಿಂದಾಗಲೀ ಭರಿಸುವ ವಿಚಾರವನ್ನು ಸರ್ಕಾರವು ಪರಿಶೀಲಿಸುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಯನ್ನು ಅಗಲಗೊಳಿಸಿ ಅಭಿವೃದ್ಧಿಗೊಳಿಸುವ ಮೂಲಕ ವಾಹನಗಳ ಸಾಂದ್ರತೆ ಹಾಗೂ ಅಪಘಾತ ತಡೆಗಟ್ಟುವ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ರಾಜ್ಯ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ಸಭೆಯ ಮುಂದೆ ನೀಡಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ 242 ಕಿ.ಮೀ. ಉದ್ದ ರಾಷ್ಟ್ರೀಯ ಹೆದ್ದಾರಿ ಮತ್ತು 606 ಕಿ.ಮೀ. ಉದ್ದ ರಾಜ್ಯ ಹೆದ್ದಾರಿ ಇರುತ್ತದೆ. ರಾಷ್ಟ್ರೀಯ ಹೆದ್ದಾರಿಯು 2 ಪಥ ರಸ್ತೆಯಾಗಿದ್ದು, ಎಂ.ಜಿ.ಎಸ್.ಟಿ. ನಿಯಮಗಳ ಪ್ರಕಾರ ಅಲ್ಲಿಯ ಸಂಚಾರಕ್ಕೆ ಅನುವಾಗುವಂತೆ ವಿನ್ಯಾಸಗೊಳಿಸಲಾಗಿದ್ದಿತು. ಪ್ರಸಕ್ತ ವಾಹನ ಸಂಚಾರ ದಟ್ಟಣೆ ಅತಿ ಹೆಚ್ಚಾಗಿರುವ ಭಾಗಗಳನ್ನು ಅಗಲಪಡಿಸುವ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ರಾಜ್ಯ ಹೆದ್ದಾರಿ ಪೈಕಿ 686 ಕಿ.ಮೀ. ಉದ್ದದ ರಸ್ತೆಗಳು ಡಾಂಬರಿ ರಸ್ತೆಯಾಗಿರುತ್ತದೆ. ಹಾಗೂ 10 ಕಿ.ಮಿ. ಉದ್ದದ ರಸ್ತೆಗೆ ಡಾಂಬರೀಕರಣವನ್ನು ಮಾಡಬೇಕಾಗಿರುತ್ತದೆ. ಇದರಲ್ಲಿ 524 ಕಿ.ಮೀ. ಉದ್ದ ಏಕ ಪಥ ರಸ್ತೆಯಾಗಿರುತ್ತದೆ.169ಕಿ.ಮಿ. ಮಧ್ಯಮ ಪಥ ರಸ್ತೆಯಾಗಿರುತ್ತದೆ. ಸಂಚಾರದಟ್ಟಣೆಯನ್ನು ಗಮನಿಸಿ ಅತ್ಯಂತ ಅವಶ್ಯವಿರುವ ಭಾಗದಲ್ಲಿ ರಸ್ತೆಯನ್ನು ದ್ವಿಪಥ ರಸ್ತೆಗೆ ಅನುವಾಗುವಂತೆ ಅಗಲ ಪಡಿಸುವುದು ಹಾಗೂ ಪ್ರಥಮ ಹಂತದಲ್ಲಿ ಮಧ್ಯಮ ಪಥ 5.5 ಮೀಟರ್ ಅಗಲಕ್ಕೆ ಅಗಲಪಡಿಸುವ ಪ್ರಸ್ತಾವನೆಯನ್ನು ಹಾಕಿಕೊಂಡು ಅದರಂತೆ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ, ರಸ್ತೆಗಳನ್ನು ಹಂತ ಹಂತವಾಗಿ ಸಂಚಾರ ದಟ್ಟಣೆಗೆ ಅನುವಾಗುವಂತೆ ಅಗಲಪಡಿಸಲಾಗುತ್ತದೆ.

ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದರ ಬಗ್ಗೆ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು 1989-90ನೇ ಸಾಲಿನ ವರ್ಷದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಪ್ರಸ್ತುತ ಈಗ ಉಳ್ಳಾಲದ ಪೇಟೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದರೂ ಅದು ಕಾರ್ಯಗತಗೊಂಡಿರುವುದಿಲ್ಲ. ಆದುದರಿಂದ ಈ ಕ್ಷೇತ್ರದ ಜನರ ಬಹುದಿನಗಳ ಬೇಡಿಕೆಯಂತೆ ಪ್ರಸ್ತುತ ಈ ಉಳ್ಳಾಲ ಪೇಟೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ